"ನಮ್ಮ ಓಣಿಯವರಂತೂ ಎಣಿಸಿ ಎಣಿಸಿ ಚಪಾತಿ ತಿನ್ನುತ್ತಾರೆ" ಎಂದು ಹೇಳಿ ನಗುತ್ತಾ ಪಾಟೀಲನ ಮುಖ ಅವ್ಯಕ್ತವಾದ ಗರ್ವದಿಂದ ತುಂಬಿ ಹೋಗುತ್ತದೆ. ಪಾಟೀಲನ ಬ್ಯಾಂಕ್ ಪಾಸ್ ಬುಕ್ಕಿನ ಕೊನೆಯ ಶಿಲ್ಕು ನೋಡಿ ಒಂದು ಕ್ಷಣ ದಂಗಾಗುತ್ತಾ, ಈ ಪಾಟೀಲ ಮಾಡುವುದಾದರೂ ಏನು? ಯಾವಾಗ ನೋಡಿದರೂ ದಿನಪೂರ್ತಿ ಮನೆಯಲ್ಲಿಯೇ ಇರುತ್ತಾನೆ. ಒಂದೆರಡು ಗಂಟೆ ಹೊರಹೋಗುತ್ತಾನೆ ಅಷ್ಟೆ. ಅಗದಿ ಅನಾಡಿ ಮನುಷ್ಯ. ಅ ಆ ಇ ಈ ಕೂಡಾ ಹೇಳಲು ಬರುವುದಿಲ್ಲ. ಆದರೆ ಯಾವಾಗ ನೋಡಿದ್ರೂ ಗರಿ ಗರಿ ನೋಟುಗಳನ್ನು ಎಣಿಸುತ್ತಾನೆ. ಸಿನಿಮಾ ದಂಧೆಯಲ್ಲಿದ್ದಾನೆ ಅಂತಾ ಹೇಳುತ್ತಾರೆ. ನಾನಂತೂ ಒಂದೂ ಫಿಲ್ಮಿನಲ್ಲೂ ಅವನ ಹೆಸರು ನೋಡಿಲ್ಲ. ಯಾವಾಗ ಕೇಳಿದರೂ ಫಿಲ್ಮ್ ಫಿಟ್ಟಿಂಗ್ ಕೆಲಸ ಮಾಡುತ್ತೇನೆ ಎಂದು ಹೇಳುತ್ತಾ ತಿರುಗುತ್ತಾನೆ. ಹೊಸ ಫಿಲ್ಮ್ ಬಂದಾಗ ಒಂದೆರಡು ವಾರ ಪಾಸ್ ಕೊಡುತ್ತ ಊರೂರು ತಿರುಗುವುದೇ ಅವನ ಕೆಲಸ. ಅವನು ಪಾಸ್ ಕೊಟ್ಟಂತಹ ಫಿಲ್ಮ್‌ಗಳು ಎರಡು ವಾರಕ್ಕಿಂತ ಹೆಚ್ಚು ಓಡುವುದೇ ಇಲ್ಲ. ಸುಮ್ಮನೇ ಹೌಸ್‌ಫುಲ್ ಬೋರ್ಡ್ ಹಾಕುತ್ತಾನೆ. ನಮ್ಮ ಜನಾನೂ ಹಾಗೇ ಅದನ್ನೇ ನಂಬಿ ಬಿಡುತ್ತಾರೆ.

ಮನೆಯಿಂದ ಹೊರ ಬೀಳುವಾಗ ಅವನ ಹೆಂಡತಿ ಇಪ್ಪತ್ತು ರೂಪಾಯಿ ಸಾಲ ಇಸಿದುಕೊಂಡು ಬರುವುದನ್ನು ಮತ್ತೊಮ್ಮೆ ನೆನಪು ಮಾಡುತ್ತಾಳೆ. ಗಲ್ಲಿಯಿಂದ ಹಾದು ಹೋಗುತ್ತಿರುವಾಗ ಗಲ್ಲಿಯಲ್ಲಿ ಆಡುತ್ತಿರುವ ಮಕ್ಕಳ ದೃಶ್ಯ ಅವನಿಗೆ ಏನೆಲ್ಲಾ ನೆನಪುಗಳನ್ನು ಮರುಕಳಿಸುವಂತೆ ಮಾಡುತ್ತದೆ. ಏಳೆಂಟು ವರ್ಷದ ಕೆಂಪು ಬಣ್ಣದ ಪಾಟೀಲನ ಮಗ ಮಕ್ಕಳು ಆಡುವ ಮೋಟಾರ್ ಗಾಡಿ ಮೇಲೆ ಕೂತಿದ್ದಾನೆ. ತನ್ನ ಮಗ ಆ ಮೋಟಾರ್ ಗಾಡಿಯನ್ನು ತಳ್ಳುತ್ತಿದ್ದಾನೆ. ಈ ದೃಶ್ಯ ಒಮ್ಮೆಲೇ ಅವನಿಗೆ ತನ್ನಪ್ಪನನ್ನು ನೆನಪಿಸುತ್ತದೆ. ಭೂತಕಾಲದಲ್ಲಿ ಅಪ್ಪ ಮತ್ತು ನಾನು ಜೀವನಪೂರ್ತಿ ಇನ್ನೊಬ್ಬರ ಹಮಾಲಿ ಮಾಡುತ್ತಾ, ಅವರಿವರ ಕೊಟ್ಟಿಗೆ ಸಗಣಿ ಬಳಿಯುತ್ತಾ ಕಳೆದ ದಿನಗಳು ನೆನಪಿಗೆ ಬರುತ್ತವೆ. ನನ್ನ ಮಗ ಕೂಡಾ ಅದೇ ಹಾದಿಯಲ್ಲಿ ಹೋಗುತ್ತಿದ್ದಾನೆ ಎನ್ನಿಸಿ ತನ್ನ ಮಗನನ್ನು ವಕ್ರದೃಷ್ಟಿಯಿಂದ ಕರೆದು,

"ಮಗನೇ! ಮನೆಗೆ ಹೋಗಿ ಪುಸ್ತಕ ತಗೆದು ಓದಿಕೊ!... ಇಲ್ಲಂದ್ರೆ..."

ಮಗ ತನ್ನ ತಂದೆ ಕಡೆ ನೋಡುತ್ತಾ ಅವನ ಕಣ್ಣುಗಳನ್ನು ನೋಡಿ ಭಯಭೀತನಾಗಿ ಎದ್ದು ನಿಂತು ಮಣ್ಣಿನಲ್ಲಿ ಆಡುತ್ತಿದ್ದ ತನ್ನ ಕೈಗಳನ್ನು ಚಡ್ಡಿಗೆ ಒರೆಸಿಕೊಂಡು,

"ಅಪ್ಪಾ!... ನನಗೂ ಇಂತಹದೊಂದು ಮೋಟಾರು ಗಾಡಿ ಕೊಡ್ಸು" ಎನ್ನುತ್ತಾನೆ.

"ಹಾಂ!... ಹಾಂ!... ಕೊಡುಸುವೆ... ಮೊದಲನೇ ತಾರೀಖು ಬರಲಿ" ಎನ್ನುತ್ತಾ ಮಗನ ಕೈಗಳನ್ನು ಮೋಟಾರು ಕಾರಿನಿಂದ ತೆಗೆಸುತ್ತಾನೆ.

ಮಗ ಸಿಟ್ಟಿನಿಂದ "ಅಪ್ಪಾ!... ನಿನ್ನ ಆ ಮೊದಲನೇ ತಾರೀಖು ಯಾವಾಗ ಬರುತ್ತೆ?"

ಮಗನ ಈ ಪ್ರಶ್ನೆಯಿಂದ ವಿಚಲಿತಗೊಳ್ಳುತ್ತಾ, ಮಗ ಕೇಳುವುದು ಸರಿಯಾಗಿಯೇ ಇದೆ. ಮಗ ಏನೇ ಕೇಳಿದರೂ ನಾನು ಅವನಿಗೆ ಮೊದಲನೇ ತಾರೀಖು

